**<u>ಅಸಲು ದಾವೆ ಸಂಖ್ಯೆ.209/2019</u>**

ಪಿ.ಡಬ್ಲ್ಯು:1

**ದಿನಾಂಕ:18.08.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ.ಆರ್.ಎಸ್ ವಕೀಲರಿಂದಃ-</u>**

ನನಗೆ ಸೇರಿದ ಆಸ್ತಿ ಪ್ರತಿವಾದಿಗಳ ಜಮೀನಿನ ಪಕ್ಕದಲ್ಲಿ ಇರುತ್ತದೆ. ದಾವಾ ಸರ್ವೆ ನಂಬರ್ ಗಳ ದಕ್ಷಿಣ ಭಾಗಕ್ಕೆ ನಾಗಮ್ಮ ವರ ಆಸ್ತಿ ಇದೆ ಎಂದರೆ ಸರಿ. ಪ್ರತಿವಾದಿಗಳು ನನ್ನ ಸ್ವಾಧೀನಕ್ಕೆ ತೊಂದರೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ಸೇರಿದ ಆಸ್ತಿಯನ್ನು ಒತ್ತುವರಿ ಮಾಡಲು ಪ್ರಯತ್ನಿಸಿರುತ್ತೇನೆಂದರೆ ಸರಿಯಲ್ಲ. ನನಗೆ ಸೇರಿದ ಆಸ್ತಿಗೆ ತಂತಿ ಬೇಲಿಯನ್ನು ಹಾಕಿಕೊಂಡಿರುತ್ತೇನೆ. ನಾನು ತಂತಿ ಬೇಲಿ ಹಾಕಿದ್ದನ್ನು ಪ್ರತಿವಾದಿಗಳು ಪ್ರಶ್ನಿಸಿದ್ದರಿಂದ ಅವರ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನಾನೇ ಪ್ರತಿವಾದಿಗಳು ಸ್ವಾಧೀನ ಇರುವ ಆಸ್ತಿಗೆ ತೊಂದರೆ ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ದಾವಾ ಸ್ವತ್ತನ್ನು ಅಳತೆ ಮಾಡಿಸಿ ತಂತಿಬೇಲಿ ಹಾಕಿಸಿಕೊಂಡಿರುತ್ತೇನೆ. ದಾವಾ ಸ್ವತ್ತನ್ನು ಅಳತೆ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ದಾವಾ ಸ್ವತ್ತನ್ನು ಅಳತೆ ಮಾಡುವ ಸಮಯದಲ್ಲಿ ಪ್ರತಿವಾದಿಗಳಿಗೆ ನೋಟೀಸ್ ನೀಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.